ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**
(ಸ್ವಾಯತ್ತ)
ಬಿ.ಎನ್. ರಸ್ತೆ, ಮೈಸೂರು – 570 025
ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)
Ph: 0821-2548236 & 2548380. FAX: 0821-2548238 E-mail: jssautonomous@gmail.com Website: JSSCACS.edu.in

ದಿನಾಂಕ: 08.09.2017

## ಪ್ರಕಟಣೆಯ ಕೃಪೆಗಾಗಿ

### ಜೆಎಸ್‌ಎಸ್ ಕಾಲೇಜಿನ ವತಿಯಿಂದ ಸ್ವಚ್ಛತಾ ಜಾಥಾ

ಕೇಂದ್ರ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಸೆಪ್ಟಂಬರ್ 01 ರಿಂದ 15 ರವರೆಗೆ ಸ್ವಚ್ಛತಾ ಪಕ್ವಾಡ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ದೇಶಾದ್ಯಂತ ಈ ದಿನಗಳಂದು ಸ್ವಚ್ಛತೆಗೆ ಸಂಬಂಧಿಸಿದಂತೆ ವಿವಿಧ ಚಟುವಟಿಕೆಗಳು ನಡೆಯುತ್ತಿವೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಈ ಕಾರ್ಯಕ್ರಮವನ್ನು ನಡೆಸಲು ಕಾರ್ಯಸೂಚಿ ರೂಪಿಸಿದೆ. ಅದರ ಪ್ರಕಾರ ಊಟಿ ರಸ್ತೆಯಲಲಿನ ಜೆ.ಎಸ್.ಎಸ್ ಕಾಲೇಜಿನಲ್ಲಿ ಸೆಪ್ಟಂಬರ್ 01 ರಿಂದ 15 ರವರೆಗೆ ಸ್ವಚ್ಛ ಆವರಣ, ಹಸಿರು ಆವರಣ, ಸ್ವಚ್ಛ ಉಪಾಹಾರ ಗೃಹ, ಸ್ವಚ್ಛ ವಸತಿ ನಿಲಯ ದಿನಗಳನ್ನು ಆಚರಿಸುವುದರ ಜೊತೆಗೆ ಸ್ವಚ್ಛತೆಗೆ ಸಂಬಂಧಿಸಿದಂತೆ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ.

ಸ್ವಾಯತ್ತ ಕಾಲೇಜಿನ ಪರಿವೀಕ್ಷಣೆಗಾಗಿ ಭೇಟಿ ನೀಡಿರುವ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ವರಿಷ್ಠ ಸಮಿತಿಯ ಮುಖ್ಯಸ್ಥರಾದ ಅಮೃತಸರದ ಗುರುನಾನಕ್ ದೇವ್ ವಿಶ್ವವಿದ್ಯಾಲಯದ ಪ್ರೊ. ಶ್ವೇತ ಶೆಣೈ ದೇವರಾಜು ಅವರು ಜಾಥಾವನ್ನು ಉದ್ಘಾಟಿಸಿದರು. ಜಾಥಾವು ಕಾಲೇಜಿನಿಂದ ಹೊರಟು, ಗೌರಿಶಂಕರ ನಗರಕ್ಕೆ ತೆರಳ ಸ್ವಚ್ಛತಾ ಕಾರ್ಯವನ್ನು ಕೈಗೊಂಡಿತು. ಜಾಥಾದಲ್ಲಿ ಸ್ವಚ್ಛತೆಯ ಬಗೆಗಿನ ಬರಹಗಳನ್ನೊಳಗೊಂಡ ಫಲಕಗಳನ್ನು ಘೋಷಣೆಗಳೊಂದಿಗೆ ಪ್ರದರ್ಶಿಸಲಾಯಿತು. ಹಾಗೂ ಸ್ವಯಂ ಸೇವಕರು ಮನೆಮನೆಗೆ ತೆರಳಿ ಕರಪತ್ರಗಳನ್ನು ನೀಡಿ ಅರಿವು ಮೂಡಿಸಿದರು.

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ವರಿಷ್ಠ ಸಮಿತಿಯ ಸದಸ್ಯರಾದ ನವದೆಹಲಿಯ ಡಾ. ಸುಚಿತ ಮಲಿಕ್, ದುರ್ಗಾ ಮಲ್ಲೇಶ್ವರ ಸಿದ್ಧಾರ್ಥ ಮಹಿಳಾ ಕಳಸದ ಪ್ರಾಂಶುಪಾಲರಾದ ಡಾ. ಟಿ. ವಿಜಯ ಲಕ್ಷ್ಮಿ, ಬೆಂಗಳೂರಿನ ಮಹಾರಾಣಿ ಮಹಿಳಾ ಕಾಲೇಜಿನ ವಿಶೇಷಾಧಿಕಾರಿಗಳಾದ ಪ್ರೊ. ರವೀಂದ್ರ ರೇಷ್ಮೆ, ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಪ್ರೊ. ಪ್ರೀತಿ ಶ್ರೀಮಂಧರ ಕುಮಾರ್, ಯುಜಿಸಿಯ ನೈಋತ್ಯ ವಿಭಾಗದ ಜಂಟಿ ಕಾರ್ಯದರ್ಶಿಗಳಾದ ಡಾ. ಗೋಪು ಕುಮಾರ್, ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯ, ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿಗಳಾದ ಶ್ರೀ ಎನ್. ಸಂತೋಷ್ ಕುಮಾರ್ ಹಾಗೂ ಸಹ ಕಾರ್ಯಕ್ರಮಾಧಿಕಾರಿಗಳಾದ ಶ್ರೀ ಬಿ.ಎಲ್. ಕಿರಣ್ ರವರು ಉಪಸ್ಥಿತರಿದ್ದರು.

(ಪ್ರೊ. ಎಂ. ಮಹದೇವಪ್ಪ)
ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25

ಗೆ
ಸಂಪಾದಕರು
– – – – – – – – – – – – – –
– – – – – – – – – – – – – –